# ಕಿಚ್ಚಿಲ್ಲದ ಬೇಗೆಯಲಿ



**ಮೋದೂರು ತೇಜ**

ಕಲೆ: ರಾಮಕೃಷ್ಣ ಸಿದ್ರಪಾಲ

**ಒಮ್ಮೆ ಕಾಮನ ಕಾಲ ಹಿಡಿವೆ,**
**ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ**
**ಸುಡಲೀ ವಿರಹವ, ನಾನಾರಿಗೆ ಧೃತಿಗೆಡುವೆ**
**ಚೆನ್ನಮಲ್ಲಿಕಾರ್ಜುನದೇವನೆನ್ನನೊಲ್ಲದ ಕಾರಣ**
**ಎಲ್ಲರಿಗೆ ಹಂಗಿತಿಯಾದೆನವ್ವ**
**-ಅಕ್ಕಮಹಾದೇವಿ**

ಪ್ರಕ್ಷುಬ್ಧಗೊಂಡ ಕಡಲಿನಂತಿದ್ದ ರೂಪಾಳ ಮನಸು, ಮಳೆಯಲ್ಲಿ ಮಿಂದ ನೆಲದೊಡಲು ಪುಳಕಗೊಂಡಿರುವುದಕ್ಕೆ ಪುರಾವೆ ಒದಗಿಸಲು ಮೆರವಣಿಗೆ ಹೊರಟ ಮಣ್ಣಿನ ವಾಸನೆಗೆ ಮನಸೋತಿತ್ತು. ವೇಗವಾಗಿ ಹೋಗುವ ಕಾರಿನ ವಿಂಡೊಗ್ಲಾಸ್ ಅರ್ಧಕ್ಕಿಳಿಸಿ ಗಾಳಿಯೊಂದಿಗೆ ಬೆರೆತು ಬರುವ ಮಣ್ಣಿನ ಕಣಕಣದ ಕಂಪನ್ನ ಆಸ್ವಾದಿಸಲು ಪ್ರಯತ್ನಿಸಿದಳಾದರೂ ಅಂದ್ಕಾರಿರಲಿಲ್ಲ. ಮನಸ್ಸಿಗೆ ಅತೃಪ್ತಿಯೆನಿಸಿದ್ದರಿಂದ ಮುಂದಿನ ಸೀಟಲ್ಲಿ ಕುಂತಿದ್ದ ರೂಪಾ ಕಾರು ನಿಲ್ಲಿಸಲು ಹೇಳಿದಾಗ, ಡ್ರೈವರ್ ಹಿಂದಿನ ಸೀಟಿನ ಕಡೆ ನೋಡಿದ. ರೂಪಾಳ ಚಿಕ್ಕಮ್ಮ ಕಲಾವತಿ, 'ಬೆಳ್ಳಂ ಬೆಳಗ್ಗೆನೆ ಮಳೆ ಬಂದಿದ್ದರಿಂದ ದಾರೀನೆ ಸರಿಯಾಗಿ ಸಾಗಲಿಲ್ಲ. ಇಲ್ಲಿಗೇ ಲೇಟಾಯ್ತು, ಜಲ್ದಿ ನಡಿಯಪ್ಪ' ಅಂತ ಸ್ವಲ್ಪ ಅಸಮಾಧಾನದಿಂದ ಹೇಳಿದಳು. ಆಕೆ ಪಕ್ಕದಲ್ಲಿ ಕುಳಿತಿದ್ದ ಸುಜಾತ, 'ಪರವಾಗಿಲ್ಲ ಸ್ವಲ್ಪ ಹೊತ್ತು ನಿಲ್ಸಪ್ಪ' ಅಂತ್ಹೇಳಿ ಚಿಕ್ಕಮ್ಮನ ಕೈನ ಮೃದುವಾಗಿ ಅದುಮಿ ಕಣ್ಸನ್ನೆ ಮಾಡಿದಳು. ಕಲಾವತಿಯ ಗಂಡನ ಅಣ್ಣನ ಮಗಳಾದ ಸುಜಾತಳ ಮುತುವರ್ಜಿಯಲ್ಲಿ ರೂಪಾಳಿಗೆ ಟ್ರೀಟ್‌ಮೆಂಟ್ ಕೊಡಿಸುತ್ತಿರುವುದರಿಂದ ಅವಳ ಮಾತನ್ನು ಮೀರಲಾರದೆ ಕಲಾವತಿ ಕಾರು ನಿಲ್ಲಿಸಲು ಹೇಳಿದಳು. ಶಂಖದಿಂದ ಬಂದರೆ ಮಾತ್ರ ತೀರ್ಥ ಎಂಬಂತೆ ವರ್ತಿಸಿದ ಡ್ರೈವರ್ ಕಡೆ ಕೆಕ್ಕರಿಸಿಕೊಂಡು ನೋಡಿದ ರೂಪಾ ಸಿಡಿಮಿಡಿಗೊಂಡು ಕಾರಿನಿಂದಿಳಿಯುತ್ತಾ ತೇವದ ನೆಲದಲ್ಲಿ ಪಾದಗಳನ್ನೂರಿದಾಗ ಅವಳ ಸಿಟ್ಟಿನ ಕೆನ್ನೆ ತಟ್ಟಿ ಸಂತಸಗೊಳಿಸುವಷ್ಟು ರಮಣೀಯವಾಗಿತ್ತು ನಿಸರ್ಗದ ಒಳಗುಟ್ಟು. ನೆಲ ಸೋಕಿಕೊಂಡು ಬೀಸುವ ತಂಗಾಳಿಗೆ ತಲೆದೂಗುತ್ತಿದ್ದ ಎರೆಹೊಲದಲ್ಲಿನ ರಾಗಿ ಪೈರು, ಮಳೆಗೆ ಮೈಯೊಡ್ಡಿದ ಖುಷಿಗೆ ಕಿಲಕಿಲನೆ ನಗುತ್ತಿದ್ದ ಹೆದ್ದಾರಿ ಪಕ್ಕದಲ್ಲಿನ ಗಿಡಮರಗಳು. ದೂರದಲ್ಲಿ ಕಾಣುವ ತೆಂಗಿನ ತೋಟಗಳ ನಡುವಿನ ಊರು. ಆ ಊರಿನ ಹಿನ್ನೆಲೆಯಲ್ಲಿರುವ ಬೆಟ್ಟದ ಸಾಲು. ಮೋಡದ ಭಾರವನ್ನು ಇಳಿಸಿಕೊಂಡು ನಿಶ್ಚಲವಾಗಿ ನಗುತ್ತಿದ್ದ ತಿಳಿನೀಲಿ ಆಗಸವನ್ನು ಕಂಡ ರೂಪಾಳ ಮನಸು ಗರಿಬಿಚ್ಚಿದ ನವಿಲಿನಂತಾಗಿತ್ತು.

ನಗುವಿನ ಒಡವೆಯನ್ನು ಬಿಗುಮಾನದ ಬಳಿ ಒತ್ತೆಯಿಟ್ಟು ಬಂದವಳಂತಿರುತ್ತಿದ್ದ ರೂಪಾ